ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ಕಲ್ಯಾಣ ಕರ್ನಾಟಕ ಅಡಿಯಲ್ಲಿ ಬರುವ ಶಾಲಾ ಶಿಕ್ಷಕರಿಗೆ ವೇತನ ನೀಡುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

1472 (1668) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2019ರಲ್ಲಿ ಹೊಸ ವರ್ಗಾವಣೆ ನಿಯಮದ ಪ್ರಕಾರ ಕೌನ್ಸಲಿಂಗ್ ನಲ್ಲಿ ಸ್ಥಳವನ್ನು ತೋರಿಸಿದಾಗ ಶಿಕ್ಷಕರು ಸದರಿ ಸ್ಥಳಕ್ಕೆ ವರ್ಗಾವಣೆ ಯನ್ನು ಪಡೆದುಕೊಂಡಿದ್ದು ಕಲ್ಯಾಣ ಕರ್ನಾಟಕ ಅಡಿಯಲ್ಲಿ ಬರುವ ಶಾಲೆಗಳಲ್ಲಿ ಸ್ಥಳವನ್ನು ತೆಗೆದುಕೊಂಡ ಶಿಕ್ಷಕರುಗಳಿಗೆ 6 ತಿಂಗಳಿನಿಂದ ವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಾರಣಗಳನ್ನು ನೀಡುವುದು;

(ಆ) ಅಂತಹ ಶಾಲೆಗಳಿಗೆ ವರ್ಗಾವಣೆಗೊಂಡ ಶಿಕ್ಷಕರಿಗೆ ಯಾವ ಕಾಲಮಿತಿಯೊಳಗೆ ವೇತನವನ್ನು ನೀಡಲಾಗುವುದು ?